# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ,ತುಮಕೂರು-572 103 ☎:0816 - 2255650,2273511 ಫ್ಯಾಕ್ಸ್ : 0816-2270719


ಸಂಖ್ಯೆ:ತು.ವಿ.: ಪ.ವಿ.:2022-23 482 ದಿನಾಂಕ: 14.09.2022

## ಸುತ್ತೋಲೆ

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಬರುವ ವಿವಿಧ ಸ್ನಾತಕ ಪದವಿಗಳ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ವಿತರಿಸುವ ಕುರಿತು.

ಉಲ್ಲೇಖ: ಸಂ.: ತುವಿ:ಪ.ವಿ: ಪ.ಶುಲ್ಕ: 2022-23: 481 ದಿನಾಂಕ: 13.09.2022

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ 2021-22 ನೇ ಸಾಲಿನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಅಡಿಯಲ್ಲಿ ಬರುವ ವಿವಿಧ ಸ್ನಾತಕ ಪದವಿಗಳ ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾದೆ. ಸದರಿ ಅಧಿಸೂಚನೆಯನ್ವಯ ಪರೀಕ್ಷಾ ಶುಲ್ಕ ಪಾವತಿಸಿ ಪ್ರಾಂಶುಪಾಲರಿಂದ ಪರೀಕ್ಷಾ ಅರ್ಜಿ ಅನುಮೋದಿಸಲ್ಪಟ್ಟ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ದಿನಾಂಕ: 08.10.2022 ರಿಂದ ಮುದ್ರಿಸಿಕೊಳ್ಳಬಹುದಾಗಿರುತ್ತದೆ. ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಯನ್ವಯ ದ್ವಿತೀಯ ಸೆಮಿಸ್ಟರ್ ಸೈದ್ಧಾಂತಿಕ ತರಗತಿಗಳ ಮುಕ್ತಾಯದ ದಿನಾಂಕ: 22.10.2022 ಆಗಿರುವುದರಿಂದ, ಸಂಬಂದಪಟ್ಟ ಕಾಲೇಜಿನವರು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಎಲ್ಲಾ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಆದರೆ ವಿದ್ಯಾರ್ಥಿಗಳಿಗೆ ವಿತರಿಸುವಂತಿಲ್ಲ. ದಿನಾಂಕ: 20.10.2022 ರ ನಂತರವೇ ಪ್ರವೇಶ ಪತ್ರಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮವಹಿಸುವುದು.

**ಸೂಚನೆ:** ಪ್ರಾಯೋಗಿಕ ಪರೀಕ್ಷೆಗಳಿಗೆ ಪರೀಕ್ಷಾ ಕೊಠಡಿಯಲ್ಲಿ ಪ್ರವೇಶ ಪತ್ರಗಳನ್ನು ಕಡ್ಡಾಯಗೊಳಿಸುವಂತಿಲ್ಲ. ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಪ್ರಾಂಶುಪಾಲರಿಂದ ಪರೀಕ್ಷಾ ಅರ್ಜಿ ಅನುಮೋದಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಆಯಾ ಕಾಲೇಜುಗಳಿಂದ ವಿತರಿಸಲ್ಪಟ್ಟ ಗುರುತಿನ ಚೀಟಿಯನ್ನು ಪರಿಗಣಿಸಿ ಪ್ರಾಯೋಗಿಕ ಪರೀಕ್ಷೆಗಳಿಗೆ ಹಾಜರಾಗಲು ಅನುವು ಮಾಡಿಕೊಡಲು ಸೂಚಿಸಿದೆ.

ಕುಲಸಚಿವರು (ಪರೀಕ್ಷಾಂಗ)

ಗೆ,

**ಪ್ರಾಂಶುಪಾಲರು, ಎಲ್ಲಾ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು:**

1. ಅಧ್ಯಕ್ಷರು, ಎಲ್ಲಾ ಸ್ನಾತಕ ವಿಷಯಗಳ ಪರೀಕ್ಷಾ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಅಂತರ್ಜಾಲದಲ್ಲಿ ಪ್ರಕಟಿಸುವುದು.
3. ಕಛೇರಿ ಪ್ರತಿ.